NOVEMBER 12, 2024

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

<><><>

- ಭಾರತ್ ಬ್ರ್ಯಾಂಡ್ 2ನೇ ಆವೃತ್ತಿ; ದೇಶಾದ್ಯಂತ ಗ್ರಾಹಕರಿಗೆ, ಮನೆ ಬಾಗಿಲಿಗೆ, ಸೋವಿ ದರದಲ್ಲಿ, ಆಹಾರ ಧಾನ್ಯ ವಿತರಣೆ – ಪ್ರಲ್ಹಾದ ಜೋಶಿ.
- ಸಂವಿಧಾನದ ತತ್ವಗಳ ಅಡಿ, ವನವಾಸಿ ಸಮುದಾಯಗಳ ಅಭಿವೃದ್ಧಿಗೆ, ಕ್ರಮ – ಎಚ್.ಸಿ.ಮಹದೇವಪ್ಪ.
- ತುಂಗಾ ಭದ್ರಾ ಜಲ ಜಾಗೃತಿ, ನಾಲ್ಕು ನೂರು ಕಿಲೋ ಮೀಟರ್ ಪಾದಯಾತ್ರೆಗೆ, ಶಿವಮೊಗ್ಗದಲ್ಲಿ ಚಾಲನೆ.
- 38ನೇ ಅಖಿಲ ಭಾರತ ಅಂಚೆ ಬ್ಯಾಡ್ಮಿಂಟನ್, ಮೈಸೂರು ಪಂದ್ಯಾವಳಿ; ದಿಲ್ಲಿ ಮಹಿಳಾ ತಂಡಕ್ಕೆ ವೀರಾಗ್ರಣಿ ಮಕುಟ.

<><><>

ಈಗ ವಾರ್ತೆಗಳ ವಿವರ

<><><>

ಬೆಲೆ ಏರಿಕೆಯಿಂದ ಜನ ಸಾಮಾನ್ಯರು ಹೈರಾಣುಗುವುದನ್ನು ತಪ್ಪಿಸಲು, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ, ಎನ್.ಡಿ.ಎ. ಸರ್ಕಾರ, ದೇಶಾದ್ಯಂತ ಗ್ರಾಹಕರಿಗೆ, ನೇರವಾಗಿ ಮನೆ ಬಾಗಿಲಿಗೆ, ಸೋವಿ ದರದ ಆಹಾರ ಧಾನ್ಯ ವಿತರಣೆಗೆ ಮುಂದಾಗಿದೆ ಎಂದು, ಕೇಂದ್ರ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ ಹೇಳಿದ್ದಾರೆ. ಹುಬ್ಬಳ್ಳಿಯ ಮೂರುಸಾವಿರ ಮಠದ ಮೈದಾನದಲ್ಲಿ, ಭಾರತ್ ಬ್ರ್ಯಾಂಡ್ ಉತ್ಪನ್ನಗಳ ಎರಡನೇ ಹಂತದ, ಆಹಾರ ಧಾನ್ಯ ದಾಸ್ತಾನು ಹೊತ್ತ, ಸಂಚಾರಿ ವಾಹನಗಳಿಗೆ ಚಾಲನೆ ನೀಡಿ, ಆಹಾರ ಧಾನ್ಯದ ಕಿಟ್ ವಿತರಿಸಿ, ಮಾತನಾಡಿದರು. ಈಗಾಗಲೇ ದಿಲ್ಲಿ, ಬೆಂಗಳೂರಿನಂತಹ ದೊಡ್ಡ ನಗರಗಳಲ್ಲಿ ಭಾರತ್ ಬ್ರ್ಯಾಂಡ್ ಅಡಿ, ಆಹಾರ ಧಾನ್ಯ ವಿತರಣೆ ಕೈಗೊಂಡಿದ್ದು, ಈಗ ಹುಬ್ಬಳ್ಳಿ – ಧಾರವಾಡದಲ್ಲಿ ವಿತರಣೆ ನಡೆದಿದೆ, ಎಂದರು.

<><><>

ರಾಜ್ಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ, 154 ಬೆಳ್ಳುಳ್ಳಿ ಮಾದರಿಗಳನ್ನು ಸಂಗ್ರಹಿಸಿ, ವಿಶ್ಲೇಷಣೆಗೆ ಒಳಪಡಿಸಿದ್ದು, ಆ ಪೈಕಿ, 147 ಬೆಳ್ಳುಳ್ಳಿ ಮಾದರಿಗಳು, ಸೇವನೆಗೆ ಸುರಕ್ಷಿತ ಹಾಗೂ 7 ಮಾದರಿಗಳಲ್ಲಿ ಫಂಗಸ್ ಬೆಳವಣಿಗೆಯಾದ ಬಗ್ಗೆ, ದೃಢ ಪಡಿಸಿದೆ.

ರಾಜ್ಯಾದ್ಯಂತ 151 ಸಿಹಿ ತಿನಿಸುಗಳ ಮಾದರಿ ಹಾಗೂ ಹೊರ ರಾಜ್ಯಗಳಿಂದ ರಾಜ್ಯಕ್ಕೆ ಸರಬರಾಜಾಗುವ, ಸಿಹಿ ತಿನಿಸಿನ 90 ಮಾದರಿಗಳನ್ನು ಸಂಗ್ರಹಿಸಿ, ಪರೀಕ್ಷೆಗೆ ಒಳಪಡಿಸಿದ್ದು, 31 ಮಾದರಿಗಳಲ್ಲಿ ಆರೋಗ್ಯಕ್ಕೆ ಹಾನಿಕರವಾದ ಕೃತಕ ಬಣ್ಣಗಳ ಬಳಕೆ, ದೃಢಪಟ್ಟಿದೆ. ಈ ಬಗ್ಗೆ ಕೇರಳ ರಾಜ್ಯದ ಮುಖ್ಯ ಕಾರ್ಯದರ್ಶಿ ಅವರಿಗೆ, ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯ ಆಯುಕ್ತರು ಪತ್ರ ಬರೆದು, ಅನಧಿಕೃತ ತಯಾರಕರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ಆಗ್ರಹಿಸಿದ್ದಾರೆ.

<><><>

ರಾಜ್ಯ ಪ್ರಸೂತಿ ಶಾಸ್ತ್ರ ಹಾಗೂ ಹೆರಿಗೆ ವಿಜ್ಞಾನ ಸಮಿತಿ ಸಹಯೋಗದಲ್ಲಿ, 34ನೇ ಕಸೋಗಾ ರಾಜ್ಯ ಸಮ್ಮೇಳನ, ಹಾಸನದ ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯದಲ್ಲಿ, 3 ದಿನಗಳ ಕಾಲ ನಡೆಯಿತು. ಸ್ತ್ರೀ ಆರೋಗ್ಯ ಹಾಗೂ ಪ್ರಸೂತಿ ತಜ್ಞರ ರಾಜ್ಯ ಮಟ್ಟದ ಸಮ್ಮೇಳನದಲ್ಲಿ, ವಿಜಯಪುರದ ಅಲ್ ಅಮೀನ್ ವೈದ್ಯಕೀಯ ಮಹಾವಿದ್ಯಾಲಯದ, ಪ್ರಸೂತಿ ವಿಭಾಗದ ಸ್ನಾತಕೋತ್ತರ ಅಂತಿಮ ವರ್ಷದ ವಿದ್ಯಾರ್ಥಿನಿ, ಡಾಕ್ಟರ್ ಸೃಷ್ಟಿ ಬಸವರಾಜ ಹಟ್ಟಿಗೌಡರ, 'ಪ್ರಸೂತಿ ಸಂದರ್ಭದಲ್ಲಿ ತಾಯಂದಿರು ಎದುರಿಸುವ ಥೈರಾಯ್ಡ್ ಸಮಸ್ಯೆ' ಕುರಿತು ಸಂಶೋಧನಾ ಪ್ರಬಂಧ ಮಂಡಿಸಿದರು. ಡಾಕ್ಟರ್ ಸೃಷ್ಟಿ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಡಾ.ಸೃಷ್ಟಿ ಬಸವರಾಜ ಧ್ವನಿ 44 ಸೆಕೆಂದುಗಳು

<><><>

ಸಂವಿಧಾನದ ತತ್ವಗಳ ಅಡಿ, ವನವಾಸಿ ಸಮುದಾಯಗಳ ಅಭಿವೃದ್ಧಿಗೆ, ಮುಂದಿನ ಹತ್ತು ವ ರ್ಗಗಳು ಯೋಜನಾ ಬದ್ಧವಾಗಿ, ಕಾರ್ಯನಿರ್ವಹಿಸಿದರೆ, ಸಮಾಜದ ಮುಖ್ಯವಾಹಿನಿಗೆ ಅವರನ್ನು ತರಬಹುದು ಎಂದು, ಸಮಾಜ ಕಲ್ಯಾಣ ಖಾತೆ ಸಚಿವ ಎಚ್.ಸಿ.ಮಹದೇವಪ್ಪ ಅಭಿಪ್ರಾಯಪಟ್ಟಿದ್ದಾರೆ. ದಕ್ಷಿಣಕನ್ನಡ ಜಿಲ್ಲೆ, ಮೂಡುಬಿದಿರೆಯಲ್ಲಿ, 'ಕರಾವಳಿ ಮರಾಠಿಗರ ಸಮಾವೇಶ' ಉದ್ಘಾಟಿಸಿ ಅವರು, ಮಾತನಾಡಿದರು. ಸಾರ್ವತ್ರಿಕ ಮೂಲ ಆದಾಯದ ಪರಿಕಲ್ಪನೆಯ ಅಡಿ, ಕರಾವಳಿಯ ಮರಾಠಿ ಸಮುದಾಯದ ನ್ಯಾಯಯುತ ಬೇಡಿಕೆಗಳನ್ನು, ಸಂವಿಧಾನ ಮತ್ತು ಕಾನೂನಿನ ಚೌಕಟ್ಟಿನಡಿ ಈಡೇರಿಸಲು, ಮುಖ್ಯಮಂತ್ರಿಯವರಿಗೆ ಮನವಿ ಮಾಡುವುದಾಗಿ, ಸಚಿವರು ತಿಳಿಸಿದರು.

<><><>

ಕಲಬುರ್ಗಿ ಆಕಾಶವಾಣಿ ಕೇಂದ್ರದ, 59ನೇ ಸಂಸ್ಥಾಪನಾ ದಿನಾಚರಣೆ, ನಿನ್ನೆ ವಿಜೃಂಭಣೆಯಿಂದ ಜರುಗಿತು. ದೂರದರ್ಶನದ ನಿವೃತ್ತ ನಿರ್ದೇಶಕ ಎಂ.ಬಿ ಪಾಟೀಲ ಅತಿಥಿಗಳಾಗಿ ಪಾಲ್ಗೊಂಡು, ಕಲಬುರಗಿ ಆಕಾಶವಾಣಿ ಕೇಂದ್ರ, ಸಾಂಸ್ಕೃತಿಕ ರಂಗಕ್ಕೆ ಉತ್ತೇಜನ ಹಾಗೂ ಜನ ಮಾನಸದಲ್ಲಿ ವೈಚಾರಿಕ ಕ್ರಾಂತಿಗೆ ಪ್ರೇರಣೆ ನೀಡುತ್ತಿದೆ ಎಂದರು. ನಿಲಯದ ಕಾರ್ಯಕ್ರಮ ಮುಖ್ಯಸ್ಥ ಸೋಮಶೇಖರ ರುಳಿ, ತಾಂತ್ರಿಕ ವಿಭಾಗದ ಮುಖ್ಯಸ್ಥ ಗೋಪಾಲ ನಾಯಕ್ ಅವರು, ಕಲಬುರಗಿ ರಂಗಾಯಣದ ನಿರ್ದೇಶಕಿ ಸುಜಾತಾ ಜಂಗಮಶೆಟ್ಟಿ, ವಿಶ್ರಾಂತ ಕಾರ್ಯಕ್ರಮ ನಿರ್ವಾಹಕ ಸದಾನಂದ ಪೆರ್ಲ ಅವರನ್ನು ಸನ್ಮಾನಿಸಿದರು.

<><><>

ಉತ್ತರಕನ್ನಡ ಜಿಲ್ಲೆ, ಅಂಕೋಲಾ ತಾಲೂಕಿನ, ಶಿರೂರು ಗುಡ್ಡ ಕುಸಿತ ದುರಂತದಲ್ಲಿ ಕಣ್ಮರೆಯಾದ, ಲೋಕೇಶ್ ಮತ್ತು ಜಗನ್ನಾಥ ಕುಟುಂಬದವರಿಗೆ, ಕಾರವಾರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ, ಜಿಲ್ಲಾ ಉಸ್ತುವಾರಿ ಸಚಿವ, ಮಂಕಾಳ ವೈದ್ಯ ತಲಾ 5 ಲಕ್ಷ ರೂಪಾಯಿ ಪರಿಹಾರ ನೀಡಿ, ಸಾಂತ್ವನ ಹೇಳಿದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

400 ಕಿಲೋ ಮೀಟರ್ ಉದ್ದದ, ತುಂಗಾ ಭದ್ರಾ ಜಲ ಜಾಗೃತಿಯ, ಆರಂಭಿಕ ಪಾದಯಾತ್ರೆ, ಶಿವಮೊಗ್ಗದ ಕುವೆಂಪು ರಂಗ ಮಂದಿರದಿಂದ, ಹೊನ್ನಾಳಿ ರಸ್ತೆ ಚಟ್ನಳ್ಳಿ ವರೆಗೆ, 'ಗಂಗಾ ಸ್ನಾನ, ತುಂಗಾ ಪಾನ, ಶುದ್ಧ ನೀರು ನಮ್ಮೆಲ್ಲರ ಹಕ್ಕು' ಧ್ಯೇಯದೊಂದಿಗೆ ನಡೆಯಿತು. ನಿರ್ಮಲ ತುಂಗಾ ಭದ್ರಾ ಅಭಿಯಾನದ ಅಂಗವಾಗಿ, ರಾಷ್ಟ್ರೀಯ ಸ್ವಾಭಿಮಾನಿ ಆಂದೋಲನ, ಪರ್ಯಾವರಣ ಟ್ರಸ್ಟ್ ಈ ಪಾದಯಾತ್ರೆ ಆಯೋಜಿಸಿವೆ. ಬೆಕ್ಕಿನ ಕಲ್ಮಠದ ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮೀಜಿ ಪಾದಯಾತ್ರೆ ಚಾಲನೆ ನೀಡಿ, ನದಿ ಮತ್ತು ಮೂಲಗಳ ಸಂರಕ್ಷಣೆ, ಎಲ್ಲರ ಹೊಣೆ ಎಂದರು.

<><><>

ಶಿವಮೊಗ್ಗದ ಕೋರ್ಪಲಯ್ಯನ ಛತ್ರ ಮಂಟಪದಲ್ಲಿ ಸಂಜೆ ತುಂಗಾ ಆರತಿ ನಡೆಯಿತು. ಕೂಡ್ಲಿ ಶೃಂಗೇರಿ ಮಠದ ಶ್ರೀ ಅಭಿನವ ಶಂಕರ ಭಾರತಿ ಸ್ವಾಮೀಜಿ ಪಾಲ್ಗೊಂಡು, ತುಂಗಾ ಭದ್ರಾ ನದಿಗಳ ಸಂರಕ್ಷಣೆಗೆ ರಾಜ್ಯ ಸರಕಾರ ಕಾನೂನಿನ ಬಲ ನೀಡಬೇಕು ಎಂದರು.

<><><>

'ಭಾರತದ ಪಕ್ಷಿ ಮಾನವ' ಎಂದೇ ಖ್ಯಾತಿವೆತ್ತ, ಪದ್ಮವಿಭೂಷಣ ಡಾಕ್ಟರ್ ಸಲೀಂ ಮೊಯಿಜುದ್ದೀನ್ ಅಬ್ದುಲ್ ಅಲಿ ಅವರ 128ನೇ ಜನ್ಮ ದಿನ ಇಂದು. ಸಲೀಂ ಅಲಿ ಅವರು ಪಕ್ಷಿಗಳ ಬಗ್ಗೆ ಬರೆದ ಹಲವಾರು ಪುಸ್ತಕಗಳಲ್ಲಿ, 'ಬುಕ್ ಆಫ್ ಇಂಡಿಯನ್ ಬರ್ಡ್ಸ್', ಪಕ್ಷಿ ಅಧ್ಯಯನಿಗಳಿಗೆ ಸಂವಿಧಾನದಂತಿದೆ. 1985 ರಲ್ಲಿ 'ದಿ ಫಾಲ್ ಆಫ್ ಅ ಸ್ಪ್ಯಾರೋ' ಅವರ ಆತ್ಮಕಥೆ ಪ್ರಕಟಗೊಂಡಿದೆ. ರಾಜಸ್ಥಾನ, ಭರತ್‌ಪುರದ ಕೇವಲಾದೇವ್ ಘಾನಾ ರಾಮ್ಸರ್ ಜೌಗು ಪಕ್ಷಿಧಾಮ ಮತ್ತು ಕೇರಳದ ಸೈಲೆಂಟ್ ವ್ಯಾಲಿ ರಾಷ್ಟ್ರೀಯ ಉದ್ಯಾನ, ರಾಜ್ಯದ ರಂಗನತಿಟ್ಟು ಪಕ್ಷಿಧಾಮ ಅವರ ಪರಿಶ್ರಮದಿಂದ, ಸಂರಕ್ಷಿತ ಉದ್ಯಾನಗಳಾಗಿವೆ. ಸಲೀಮ್ ಅಲಿ ಅವರು, 1987 ಜುಲೈ 27 ರಂದು, ತಮ್ಮ 91ನೇ ವಯಸ್ಸಿನಲ್ಲಿ ನಿಧನರಾದರು. ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸಾಯಿಟಿ ಕಟ್ಟಿ, ಬೆಳೆಸುವಲ್ಲಿ ಅವರ ಶ್ರಮ ಮನನೀಯ.

<><><>

ಕಾಕತಾಳೀಯ ಎಂಬಂತೆ, ಕಾರವಾರದ ಕೈಗಾ ಟೌನ್‌ಶಿಪ್‌ನಲ್ಲಿ, ದಕ್ಷಿಣ ಚೀನಾ, ಮಂಗೋಲಿಯಾ ಮತ್ತು ರಷ್ಯಾದಿಂದ ಚಳಿಗಾಲ ಕಳೆಯಲು, 22 ಸಾವಿರ ಕಿಲೋ ಮೀಟರ್ ಕ್ರಮಿಸಿ, ವಲಸೆ ಬರುವ ಹಕ್ಕಿ, 'ಅಮೂರ್ ಫಾಲ್ಕನ್' ಗೋಚರಿಸಿದೆ.

ಈ ವಿಶಿಷ್ಟ ವಲಸೆ ಹಕ್ಕಿ ಬಗ್ಗೆ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಧಾರವಾಡದ ಹಿರಿಯ ಪಕ್ಷಿಮಿತ್ರ, ಆರ್.ಜಿ. ತಿಮ್ಮಾಪೂರ.

<><><>

ಆರ್.ಜಿ. ತಿಮ್ಮಾಪೂರ ಧ್ವನಿ 50 ಸೆಕೆಂದುಗಳು

<><><>

ಮೈಸೂರಿನ ಚಾಮುಂಡಿ ವಿಹಾರ ಒಳಾಂಗಣ ಕ್ರೀಡಾಂಗಣದಲ್ಲಿ ಆಯೋಜಿತ, ಮೂರು ದಿನಗಳ, 38ನೇ ಅಖಿಲ ಭಾರತ ಅಂಚೆ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ, ಮಹಿಳೆಯರ ವಿಭಾಗದ ರೋಚಕ ಫೈನಲ್ಸ್ ಪಂದ್ಯಾಟದಲ್ಲಿ, ದಿಲ್ಲಿ ತಂಡದ ಟೀನು ದಹಿಯಾ ಮತ್ತು ಮಯೂರಿ ಯಾದವ್ ಅವರ ಉತ್ತಮ ಪ್ರದರ್ಶನದ ಹಿನ್ನೆಲೆ, ಕೇರಳ ತಂಡವನ್ನು 2–0 ಅಂತರದಿಂದ ಸೋಲಿಸಿ, ತಂಡ ವೀರಾಗ್ರಣಿ ಪ್ರಶಸ್ತಿ ಮುಡಿಗೇರಿಸಿಕೊಂಡರು.

ಇಂದು, ಪುರುಷರ ವಿಭಾಗದ ಚಾಂಪಿಯನ್‌ಶಿಪ್ ಅಂತಿಮ ಪಂದ್ಯದಲ್ಲಿ, ಕೇರಳ ಹಾಗೂ ತಮಿಳುನಾಡು ಪಟುಗಳು ಸೆಣೆಸಲಿದ್ದಾರೆ. 20 ಅಂಚೆ ವಲಯಗಳಿಂದ 134 ಪುರು ´ರು, 60 ಮಹಿಳಾ ಅಧಿಕಾರಿಗಳೂ ಸೇರಿದಂತೆ, ಒಟ್ಟು 194 ಆಟಗಾರರು ಪಂದ್ಯಾವಳಿಯಲ್ಲಿ ಭಾಗವಹಿಸಿದ್ದಾರೆ.

<><><>

ಧಾರವಾಡದ, ಕರ್ನಾಟಕ ವಿದ್ಯಾವರ್ಧಕ ಸಂಘ, 69 ನೇ ಕರ್ನಾಟಕ ರಾಜ್ಯೋತ್ಸವ, ಕರ್ನಾಟಕ ನಾಮಕರಣ ಸುವರ್ಣ ಸಂಭ್ರಮದ ಅಂಗವಾಗಿ, ಇಂದು ಬೆಳಗ್ಗೆ 10.30ಕ್ಕೆ 'ಧರೆಗೆ ದೊಡ್ಡವರು' ಕಾರ್ಯಕ್ರಮ ಆಯೋಜಿಸಿದೆ. ಬೆಂಗಳೂರಿನ ಹಿರಿಯ ಪರಿಸರವಾದಿ, ನಾ. ಯಲ್ಲಪ್ಪ ರೆಡ್ಡಿ ಅವರ, ಬದುಕು ಮತ್ತು ಕೊಡುಗೆ ಕುರಿತು, ವಿಚಾರ ಸಂಕಿರಣ ಜರುಗಲಿದೆ. ಬೆಂಗಳೂರಿನ ಸತೀಶ ಚಪ್ಪರಿಕೆ, ರವೀಂದ್ರ ತುಂಬರಮನೆ ಹಾಗೂ ಶಿರಸಿಯ ಕೇಶವ ಕೂರ್ಸೆ, ವಿಷಯ ಮಂಡಿಸುವರು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ರಾಜ್ಯದ ಮೂರು ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯ ಬಹಿರಂಗ ಪ್ರಚಾರ ಅಂತ್ಯವಾಗಿದ್ದು, ನಾಳೆ ಮತದಾನ ಜರುಗಲಿದೆ. ಬಳ್ಳಾರಿ, ಹಾವೇರಿ ಹಾಗೂ ಬೆಂಗಳೂರು ದಕ್ಷಿಣ ಜಿಲ್ಲೆಗಳಲ್ಲಿ, ಸಿದ್ಧತೆಗಳು ಪೂರ್ಣಗೊಂಡಿವೆ. ಬೆಳಗ್ಗೆ 7 ಗಂಟೆಯಿಂದ ಸಂಜೆ 6 ರ ವರೆಗೆ ಮತದಾನ ನಡೆಯಲಿದೆ.

<><><>

ಚಿಕ್ಕಮಗಳೂರು ಜಿಲ್ಲೆ, ಮೂಗ್ತಿಹಳ್ಳಿ ವಸ್ತಾರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ, ಕಾಡಾನೆಗಳು ಕಾಫಿ ತೋಟಗಳಿಗೆ ನುಗ್ಗಿ ಹಾನಿ ಮಾಡಿವೆ. ಸಾರ್ವಜನಿಕರು ಮುನ್ನೆಚ್ಚರಿಕೆ ವಹಿಸುವಂತೆ, ಅರಣ್ಯ ಇಲಾಖೆ ಮನವಿ ಮಾಡಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಭಾರತ್ ಬ್ರ್ಯಾಂಡ್ 2ನೇ ಆವೃತ್ತಿ; ದೇಶಾದ್ಯಂತ ಗ್ರಾಹಕರಿಗೆ, ಮನೆ ಬಾಗಿಲಿಗೆ, ಸೋವಿ ದರದಲ್ಲಿ, ಆಹಾರ ಧಾನ್ಯ ವಿತರಣೆ – ಪ್ರಲ್ಹಾದ ಜೋಶಿ.
- ಸಂವಿಧಾನದ ತತ್ವಗಳ ಅಡಿ, ವನವಾಸಿ ಸಮುದಾಯಗಳ ಅಭಿವೃದ್ಧಿಗೆ, ಕ್ರಮ – ಎಚ್.ಸಿ.ಮಹದೇವಪ್ಪ.
- ತುಂಗಾ ಭದ್ರಾ ಜಲ ಜಾಗೃತಿ, ನಾಲ್ಕು ನೂರು ಕಿಲೋ ಮೀಟರ್ ಪಾದಯಾತ್ರೆಗೆ, ಶಿವಮೊಗ್ಗದಲ್ಲಿ ಚಾಲನೆ.
- 38ನೇ ಅಖಿಲ ಭಾರತ ಅಂಚೆ ಬ್ಯಾಡ್ಮಿಂಟನ್, ಮೈಸೂರು ಪಂದ್ಯಾವಳಿ; ದಿಲ್ಲಿ ಮಹಿಳಾ ತಂಡಕ್ಕೆ ವೀರಾಗ್ರಣಿ ಮಕುಟ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>

ಹರ್ಷ